# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1100 |
| 2 | ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 25–07–2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರಾಭಿವೃದ್ಧಿ ಹಿಂದಿನ ಸರ್ಕಾರದ ಅವಧಿಯಲ್ಲಿ ಆಯವ್ಯಯದಲ್ಲಿ ಅಮೃತ ನಗರೋತ್ಥಾನ ಯೋಜನೆ ಅಡಿ ನೀಡಿದ ಅನುದಾನವೆಷ್ಟು; ಈ ಅನುದಾನವನ್ನು ಯಾವ ಯಾವ ಬಾಬ್ತುಗಳಿಗೆ ನೀಡಲಾಗಿತ್ತು (ಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ನಗರಾಭಿವೃದ್ಧಿ ಹಿಂದಿನ ಸರ್ಕಾರದ ಅವಧಿಯಲ್ಲಿ ಆಯವ್ಯಯದಲ್ಲಿ ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ರೂ.6000.00 ಕೋಟಿಗಳನ್ನು ನೀಡಲಾಗಿರುತ್ತದೆ. ಅನುದಾನದ ಬಾಬ್ತುಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಆ) | ಬೆಂಗಳೂರು ನಗರ ಅಭಿವೃದ್ಧಿಗೆ ಈ ಅನುದಾನವನ್ನು ಪೂರ್ಣವಾಗಿ ಬಳಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು; (ಪೂರ್ಣ ಮಾಹಿತಿ ನೀಡುವುದು) | ಈ ಅನುದಾನದಲ್ಲಿ ಶೇ.80% ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿಯಾಗಿದ್ದು, ಕಟ್ಟಡಗಳ ನಿರ್ಮಾಣದಂತಹ ಇನ್ನುಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ. |
| ಇ) | ಮುಖ್ಯಮಂತ್ರಿ ನವ ನಗರೋತ್ಥಾನ ಕ್ರಿಯಾ ಯೋಜನೆಗೆ 15 ತಿಂಗಳ ಹಿಂದೆಯೆ ಅನುಮೋದನೆ ದೊರೆತಿದ್ದರೂ, ನಗರಾಭಿವೃದ್ಧಿ ಇಲಾಖೆ ಇದುವರೆಗೂ ಅನುದಾನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | • ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2021–22ನೇ ಸಾಲಿನಲ್ಲಿ ರೂ.6000 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ.<br>• ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಗಾಗಿ ಪ್ರತ್ಯೇಕವಾಗಿ ಅನುದಾನ ಬಿಡುಗಡೆ ಮಾಡುವ ಕ್ರಮ ಇರುವುದಿಲ್ಲ. ಬದಲಿಗೆ ಅಮೃತ ನಗರೋತ್ಥಾನ, ನಗರೋತ್ಥಾನ, ವಿಶೇಷ ಮೂಲಭೂತ ಸೌಕರ್ಯ, ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆಗಳನ್ನೆಲ್ಲ ಸೇರಿಸಿ ವಿಶೇಷ ಮೂಲಭೂತ ಸೌಕರ್ಯ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಅನುದಾನ ಬಿಡುಗಡೆ ಮಾಡಲಾಗುತ್ತದೆ. |
| ಈ) | ಹಾಗಿದ್ದಲ್ಲಿ, ಈ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣವಾದ ಮಾಹಿತಿ ನೀಡುವುದು) | |

**ನಅಇ 381 ಎಂಎನ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 1100ಗೆ ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ: ನಅಇ 299 ಎಂಎನ್‌ವೈ 2022 (ಇ), ಬೆಂಗಳೂರು, ದಿನಾಂಕ: 18-06-2022ರ**

**ಘೋಷ್ವಾರೆ**

| ಕ್ರ.ಸಂ. | ವಿವರ | ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| 1. | 28 ವಿಧಾನಸಭಾ ಕ್ಷೇತ್ರಗಳಿಗೆ ನಿಗಧಿಪಡಿಸಿರುವ ಅನುದಾನ | 3698.00 |
| 2. | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.9 & 11ರ ಕಾಮಗಾರಿಗಳು | 10.00 |
| 3. | ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.9ರ ಕಾಮಗಾರಿಗಳು | 15.00 |
| 4. | ಕೆ.ಆರ್. ಪುರಂ ವಿಧಾನಸಭಾ ಕ್ಷೇತ್ರದ ಗೆದ್ದಲಹಳ್ಳಿ ರೈಲ್ವೆ ಅಂಡರ್‌ಪಾಸ್ | 32.00 |
| 5. | ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ 110 ಹಳ್ಳಿಗಳ ದುರಸ್ಥಿ ಕಾಮಗಾರಿಗಳು | 25.00 |
| 6. | ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬೆಸ್ಕಾಂ ಯು.ಜಿ ಕೇಬಲ್ ಅಳವಡಿಸುವ ಕಾಮಗಾರಿಗಳಿಗಾಗಿ ಅಗೆಯಲಾಗಿರುವ ರಸ್ತೆಗಳ ದುರಸ್ಥಿ ಕಾಮಗಾರಿಗಳು | 45.50 |
| 7. | ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ನಂ.105ರ ಅಗ್ರಹಾರ ದಾಸರಹಳ್ಳಿ ಸಾರ್ವಜನಿಕ ಆಸ್ಪತ್ರೆ ಉಪಕರಣಗಳು | 25.00 |
| **A** | **ಒಟ್ಟು** | **3850.50** |
| 1. | ಘನ ತ್ಯಾಜ್ಯ ನಿರ್ವಹಣೆ | 275.00 |
| 2. | ಬಿಬಿಎಂಪಿ ಶಾಲಾ ಕಾಲೇಜುಗಳ ಅಭಿವೃದ್ಧಿ ಮತ್ತು ಪೀಠೋಪಕರಣಗಳ ಸರಬರಾಜು | 180.00 |
| 3. | ಕೆರೆಗಳ ಅಭಿವೃದ್ಧಿ | 200.00 |
| 4. | ರೈಲ್ವೆ ಕ್ರಾಸಿಂಗ್‌ನಲ್ಲಿ ಹಾದುಹೋಗುವ ಬೃಹತ್ ನೀರುಗಾಲುವೆ ಅಭಿವೃದ್ಧಿ ಹಾಗೂ ಬೃಹತ್ ನೀರುಗಾಲುವೆ ಸೇತುವೆಗಳು | 35.00 |
| 5. | ಹಾಲಿ ಪ್ರಗತಿಯಲ್ಲಿರುವ ಯೋಜನೆಗಳಿಗೆ ಹೆಚ್ಚುವರಿ ಅನುದಾನ | 96.13 |
| 6. | ರಸ್ತೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 700.00 |
| 7. | ಗ್ರೇಡ್ ಸೆಪರೇಟರ್ ನಿರ್ಮಾಣ | 404.14 |
| 8. | ಟೆಂಡರ್ ಶ್ಯೂರ್ ರಸ್ತೆಗಳು | 135.70 |
| 9. | ಹೊಸ ಆಸ್ಪತ್ರೆಗಳ ನಿರ್ಮಾಣ, ದುರಸ್ಥಿ, ಮೇಲ್ದರ್ಜೆಗೇರಿಸುವುದು, ಸಲಕರಣೆಗಳು ಹಾಗೂ ಹೆರಿಗೆ ಆಸ್ಪತ್ರೆಗಳು ಮತ್ತು ವಸತಿ ಗೃಹಗಳ ಅಭಿವೃದ್ಧಿ ಕಾಮಗಾರಿ. | 123.30 |
| **B** | **ಒಟ್ಟು** | **2149.27** |
| | **A+B ಒಟ್ಟು** | **5999.77** |
| | **Balance** | **0.23** |
| | **ಒಟ್ಟು ಮೊತ್ತ** | **6000.00** |

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

18/06